# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 | ENGLISH DAILY | Subscription Yearly - Rs. - | SATURDAY | 5-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜಾಗತಿಕ ಜೋಳ ಉತ್ಪಾದನೆ ಹೆಚ್ಚಳ

ಜಾಗತಿಕ ಜೋಳ ಉತ್ಪಾದನೆ 2022 ರಲ್ಲಿ ಹಿಂದಿನ ವರ್ಷಕ್ಕಿಂತ 7 ಶೇಕಡಾ ಹೆಚ್ಚಳವಾಗಿ 1.2 ಬಿಲಿಯನ್ ಟನ್ ಗಳಾಗಬಹುದೆಂದು ಅಂದಾಜಿಸಲಾಗಿದೆ. ಅಮೇರಿಕಾ, ದಕ್ಷಿಣ ಅಮೇರಿಕಾಗಳಲ್ಲಿ ಬೆಳೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ಬ್ರೆಜಿಲ್ ನಲ್ಲಿ ಹಿಂದಿನ ವರ್ಷಕ್ಕಿಂತ 31 ಶೇಕಡಾ ಉತ್ಪಾದನೆ ಹೆಚ್ಚಳವಾಗಿ 114 ಮಿಲಿಯನ್ ಟನ್ ಗಳಾಗಲಿದೆಯೆನ್ನಲಾಗಿದೆ. ಅರ್ಜೆಂಟಿನಾದಲ್ಲಿ ಹಿಂದಿನ ವರ್ಷಕ್ಕಿಂತ 8 ಶೇಕಡಾ ಹೆಚ್ಚಳವಾಗಿ 54 ಮಿಲಿಯನ್ ಟನ್ ಉತ್ಪಾದನೆಯಾಗಲಿದೆಯೆನ್ನಲಾಗಿದೆ. ಚೈನಾ, ಯುರೋಪ್, ಇಂಡೋನೇಶೀಯಾ, ಮೆಕ್ಸಿಕೊ, ನೈಜೀರಿಯಾ, ದಕ್ಷಿಣ ಆಫ್ರಿಕಾಗಳಲ್ಲೂ ಉತ್ಪಾದನೆ ಹೆಚ್ಚಳವಿರಲಿದೆಯೆನ್ನಲಾಗಿದೆ. ರಷ್ಯಾ ಹಾಗೂ ಉಕ್ರೈನ್ ಗಳಲ್ಲಿ ಕ್ರಮವಾಗಿ 8 ಶೇಕಡಾ, 15 ಮಿಲಿಯನ್ ಟನ್ ಹಾಗೂ 39 ಶೇಕಡಾ, 42 ಮಿಲಿಯನ್ ಟನ್ ಉತ್ಪಾದನೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ಪ್ರಸ್ತುತ ರಷ್ಯಾ, ಉಕ್ರೈನ್ ಸಂಘರ್ಷದಿಂದಾಗಿ ಅಲ್ಲಿಂದ ಜಾಗತಿಕವಾಗಿ ಪೂರೈಕೆಯಾಗದಿರುವುದರಿಂದ ರಫ್ತು ಬೇಡಿಕೆ ಹೆಚ್ಚಳವಿದ್ದು ಭಾರತದಿಂದಲೂ ರಫ್ತು ಬೇಡಿಕೆ ಹೆಚ್ಚಳವಿದೆಯೆನ್ನಲಾಗಿದ್ದು ದರ ಹೆಚ್ಚಳವಾಗುತ್ತಿದೆ. ಜೋಳ ಫ್ಯೂಚರ್ ದರ ಹೆಚ್ಚಳವಾಗಿದ್ದು, ಭೌತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳವಿದೆಯೆನ್ನಲಾಗಿದೆ.

## ಸೋಯಬೀನ್ ದರ ಹೆಚ್ಚಳ

ಉಕ್ರೈನ್ ಜಾಗತಿಕ 50 ಶೇಕಡಾ ಸೂರ್ಯಕಾಂತಿ ಎಣ್ಣೆ ವ್ಯವಹಾರ ಹೊಂದಿದ್ದು, ರಷ್ಯಾ 30 ಶೇಕಡಾ ಜಾಗತಿಕ ವ್ಯವಹಾರ ಹೊಂದಿದೆ. ಸೂರ್ಯಕಾಂತಿ ಎಣ್ಣೆ ಜಾಗತಿಕ ಖಾದ್ಯತೈಲ ವ್ಯವಹಾರದಲ್ಲಿ ಸುಮಾರು 15 ಶೇಕಡಾ ಪಾಲು ಹೊಂದಿದೆ. ರಷ್ಯಾ, ಉಕ್ರೈನ್ ಸಂಘರ್ಷದಿಂದಾಗಿ ಕಪ್ಪು ಸಮುದ್ರ ಪ್ರದೇಶದ ಈ ದೇಶಗಳಿಂದ ವ್ಯವಹಾರ ಸ್ಥಗಿತಗೊಂಡ ಹಿನ್ನಲೆಯಲ್ಲಿ ಜಾಗತಿಕ ಖಾದ್ಯತೈಲ ದರ ಹೆಚ್ಚಳವಾಗಿದೆ. ಸೂರ್ಯಕಾಂತಿ ಎಣ್ಣೆಯ ಬದಲು ಪರ್ಯಾಯವಾಗಿ ಸೋಯಬೀನ್ ಎಣ್ಣೆ ಹಾಗೂ ಪಾಮೆಣ್ಣೆಗೆ ಬೇಡಿಕೆ ವರ್ಗಾವಣೆಯಿಂದ ಬೇಡಿಕೆ ಹೆಚ್ಚಳಗೊಂಡಿದೆ. ಸಹಜವಾಗಿ ದರವೂ ಹೆಚ್ಚಳವಾಗುತ್ತಿದೆ. ಈ ಮೊದಲು ಪ್ರಮುಖ ಸೋಯಬೀನ್ ಬೆಳೆಯುವ ಪ್ರದೇಶಗಳಲ್ಲಿ ಒಣಹವೆ, ಬರ ಪರಿಸ್ಥಿತಿಯಿದ್ದುದರಿಂದ ಜಾಗತಿಕ ಸೋಯಬೀನ್ ಉತ್ಪಾದನೆ ಇಳಿಕೆಯ ಹಿನ್ನಲೆಯಲ್ಲಿ ಈ ಮೊದಲೇ ಸೋಯಬೀನ್ ದರ ಹೆಚ್ಚಳದಲ್ಲೇ ಇತ್ತು. CBOT ಸೋಯಬೀನ್ ದರ ಹಿಂದಿನ ವರ್ಷದ ಈ ಸಮಯದ ದರಕ್ಕಿಂತ 19 ಶೇಕಡಾ ಹಾಗೂ 2 ವರ್ಷ ಹಿಂದಿಗಿಂತ 80 ಶೇಕಡಾ ದರ ಹೆಚ್ಚಳವಾಗಿದೆ. ಬ್ರೆಜಿಲ್ ನ ಹೊಸ ಬೆಳೆ ಉತ್ಪಾದನೆ ಇಳಿಕೆಯಾಗುವ ಅಂದಾಜಿನಿಂದ ಹಾಗೂ ಅಮೇರಿಕಾ ಹಿಂದಿನ ಬೆಳೆಯ ಹೆಚ್ಚಿನಂಶ ಸೋಯಬೀನ್ ರಫ್ತು ಈ ಮೊದಲೇ ಮಾಡಿರುವುದರಿಂದ ಜಾಗತಿಕ ಪೂರೈಕೆ ಇಳಿಕೆಯಾಗಿದೆ. ಹಾಗೂ ಪ್ರಸ್ತುತ ಪರಿಸ್ಥಿತಿ ಮುಂದುವರಿಯಲಿದೆಯೆನ್ನಲಾಗಿದೆ. ದೇಶೀ ಮಾರುಕಟ್ಟೆಯಲ್ಲಿ ಖಾದ್ಯತೈಲ ದರ ಹೆಚ್ಚಳದಿಂದಾಗಿ ಸೋಯಬೀನ್, ಸೋಯಬೀನ್ ಎಣ್ಣೆ, ಸೋಯಮೀಲ್ ದರಗಳು ಹೆಚ್ಚಳವಾಗುತ್ತಿದೆ.

## ಟಾಂಜಾನಿಯಾದಲ್ಲಿ ಕಚ್ಚಾ ಗೋಡಂಬಿ ರಫ್ತಿಗಿಂತ ಗೋಡಂಬಿ ತಿರುಳು ತಯಾರಿಕೆಗೆ ಆದ್ಯತೆ

ಟಾಂಜಾನಿಯಾದಲ್ಲಿ ಕಚ್ಚಾ ಗೋಡಂಬಿ ರಫ್ತು ಮಾಡುವುದರಿಂದ ಅಲ್ಲೇ ಗೋಡಂಬಿ ಉತ್ಪಾದನೆ ತಿರುಳು ಕೈಗಾರಿಕೆಯಲ್ಲಿ ತೊಡಗಿಸಿಕೊಂಡರೆ ಹೆಚ್ಚು ಆದಾಯವನ್ನು ಪಡೆಯಬಹುದು ಹಾಗೂ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಯೋಚಿಸುತ್ತಿದ್ದಾರೆ ಹಾಗೂ ಕಚ್ಚಾ ಗೋಡಂಬಿ ರಫ್ತಿಗಿಂತ ಗೋಡಂಬಿ ರಫ್ತು  ಮಾಡಿದರೆ ನಷ್ಟವೆಂದು ಪರಿಗಣಿಸಲಾರಂಭಿಸಿದ್ದಾರೆ. ಇತರ ದಕ್ಷಿಣ ಆಫ್ರಿಕಾದ ಗೋಡಂಬಿ ಉತ್ಪಾದಕ ದೇಶಗಳೂ ಸ್ಥಳೀಯ ಗೋಡಂಬಿ ಉತ್ಪಾದನೆ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬಹುದು. ಮುಂದಿನ ವರ್ಷಗಳಲ್ಲಿ ಅಲ್ಲಿಂದ ಬೇರೆ ದೇಶಗಳಿಗೆ ಲಭಿಸುವ ಕಚ್ಚಾ ಗೋಡಂಬಿ ಪ್ರಮಾಣ ಇಳಿಕೆಯಾಗುವ ಸಾಧ್ಯತೆಯಿದೆ. ಆದರೂ ಹೆಚ್ಚಿನ ಭೂ ಪ್ರದೇಶದಲ್ಲಿ ಗೋಡಂಬಿ ಕೃಷಿ ಆರಂಭವಾಗಿ ಉತ್ಪಾದನೆ ಹೆಚ್ಚಾದಲ್ಲಿ ಸ್ಥಳೀಯ ಉದ್ಯಮಕ್ಕೆ ಆಗಿ ಮಿಗತೆ ಕಚ್ಚಾ ಗೋಡಂಬಿ ರಫ್ತಿಗೆ ಲಭ್ಯವಾಗಬಹುದು. ನಮ್ಮ ದೇಶದಲ್ಲಿ ಹೆಚ್ಚು ಗೋಡಂಬಿ ಬೆಳೆಯಲು ಪ್ರೋತ್ಸಾಹ ಹಾಗೂ ಬೆಳೆಗಾರರಿಗೆ ಉತ್ತಮ ದರ ಲಭಿಸಲಾರಂಭಿಸಿದರೆ ಉತ್ಪಾದನೆ ಹೆಚ್ಚಳವಾಗಿ ವಿದೇಶಿ ಕಚ್ಚಾ ಗೋಡಂಬಿ ಅವಲಂಬನೆ ಇಳಿಕೆ ಮಾಡುವ ಪ್ರಯತ್ನಗಳು ಉಪಯೋಗವಾಗಿ ಉದ್ಯಮಕ್ಕೆ ಹೆಚ್ಚಿನ ಉಪಯೋಗವಾಗುವ ಸಾಧ್ಯತೆಯಿದೆ.

## ಸಾಲ್ವೆಂಟ್ ಎಕ್ಸ್ ಟ್ರಾಕ್ಟರ್ ಅಸೋಸಿಯೇಶನ್ .(SEA) ತನ್ನ ಸದಸ್ಯರಿಗೆ ಖಾದ್ಯತೈಲ ಬೆಲೆ ಕೆ.ಜಿ ಗೆ ರೂ. 3–5 ಇಳಿಕೆ ಗೆ ಮನವಿ

ಕೇಂದ್ರ ಸರಕಾರ ತೆರಿಗೆ ಇಳಿಕೆ ಮಾಡಿದರೂ ಪ್ರಸಕ್ತ ಜಾಗತಿಕ ಪರಿಸ್ಥಿತಿಗಳಿಂದಾಗಿ ಖಾದ್ಯತೈಲಗಳ ದರ ಇಳಿಕೆಯಾಗುತ್ತಿಲ್ಲವಾದ್ದರಿಂದ,, **SEA** ಎರಡನೇ ಬಾರಿಗೆ ತನ್ನ ಸಸ್ಯ ಖಾದ್ಯತೈಲ ಉತ್ಪಾದಕರಿಗೆ ಖಾದ್ಯತೈಲ ಚಿಲ್ಲರೆ ದರ ಕೆ.ಜಿ ಗೆ ರೂ. 3–5 ಇಳಿಕೆ ಮಾಡಲು ಮನವಿ ಮಾಡಿದೆ. ಇಂಡೋನೇಶಿಯಾದ ರಫ್ತುದಾರರು ಅಲ್ಲಿನ ಸರಕಾರದ ನಿರ್ಬಂಧದಂತೆ ರಫ್ತು ಮಾಡಲುದ್ದೇಶಿಸಿದ 20 ಶೇಕಡಾ ಪಾಮೆಣ್ಣೆಯನ್ನು ಅಲ್ಲಿ ದೇಶದೊಳಗೆ ಮಾರಾಟ ಮಾಡಬೇಕಾಗಿದೆ. ಅಲ್ಲದೆ ಅಲ್ಲಿ ಹಾಗೂ ಮಲೇಶಿಯಾಗಳಲ್ಲಿ ಉತ್ಪಾದನೆ ಹಾಗೂ ದಾಸ್ತಾನು ಇಳಿಕೆಯಾಗಿದೆ. ರಪ್ಯಾ, ಉಕ್ರೈನ್ ಸಂಬಂಧಗಳ ಅನಿಶ್ಚಿತತೆ ಅಲ್ಲಿಂದ ಆಮದಾಗುವ ಸೂರ್ಯಕಾಂತಿ ಎಣ್ಣೆ ಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹಾಗೂ ಬ್ರೆಜಿಲ್, ಅರ್ಜೆಂಟಿನಾಗಳಲ್ಲಿ ಪ್ರತಿಕೂಲ ಹವಾಮಾನದಿಂದ ಸೋಯಬೀನ್ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಗಳಾದ ಜಾಗತಿಕ ಖಾದ್ಯತೈಲ ದರ ನಿರಂತರ ಹೆಚ್ಚಳವಾಗುತ್ತಿದೆ.